# <u>ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ.</u>

## ಪಿ ಸಿ ಸಂಖ್ಯೆ : 79/2025

**ಸಿಡಬ್ಲ್ಯೂ – 2**

| | | |
|---|---|---|
| ಸಾಕ್ಷಿದಾರರ ಹೆಸರು | : | ದೀಪಕ್ ಉತ್ತಯ್ಯ |
| ತಂದೆಯ ಹೆಸರು | : | ಕೆ ಯು ಗಣಪತಿ |
| ವಯಸ್ಸು | : | 49 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸ ಸ್ಥಳ | : | ಕಾವಾಡಿ ಗ್ರಾಮ ಮತ್ತು ಅಂಚೆ. |

**<u>ದಿನಾಂಕ : 24–02–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>: ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ :</u>**

1. ದಿನಾಂಕ 03–05–2010 ರಂದು ದೂರುದಾರರ ಮದುವೆಯಾಗಿರುತ್ತದೆ. ಮದುವೆಯ ಸಮಯದಲ್ಲಿ ದೂರುದಾರರ ತಂದೆ ಅವರಿಗೆ ರೂ. ಒಂಭತ್ತು ಲಕ್ಷ ಮದುವೆ ಖರ್ಚು ಮಾಡಿರುತ್ತಾರೆ ಹಾಗೂ 205 ಗ್ರಾಂ ಚಿನ್ನ ನೀಡಿರುತ್ತಾರೆ. ನಂತರ ದಿನಾಂಕ 02–12–2012 ರಂದು ದೂರುದಾರರ ಪತಿ ಮೃತಪಟ್ಟಿರುತ್ತಾರೆ. ದೂರುದಾರರು ಹಾಗೂ ಅವರ ಪತಿ ವೃತ್ತಿಯಲ್ಲಿ ವೈದ್ಯರಾಗಿರುತ್ತಾರೆ. ದೂರುದಾರರ ಪತಿ ಮೃತರಾದ ನಂತರ ದೂರುದಾರರು ವೈದ್ಯಕೀಯ ವೃತ್ತಿಯನ್ನು ಮುಂದುವರೆಸಿರುತ್ತಾರೆ.

2. ನಂತರ ದೂರುದಾರರ ಪತಿ ಮೃತರಾದ ನಂತರ ಎರಡು ವರ್ಷಗಳ ಕಾಲ ದೂರುದಾರರ ಅತ್ತೆ ಮಾವ ಅವರೊಂದಿಗೆ ಚೆನ್ನಾಗಿದ್ದರು. ನಂತರದ ದಿನಗಳಲ್ಲಿ ವೈಮನಸ್ಸು ಆರಂಭಗೊಂಡಿರುತ್ತದೆ. ದೂರುದಾರರ ಅತ್ತೆ, ಮಾವರೊಂದಿಗೆ ಅವರ ಇಬ್ಬರು ಹೆಣ್ಣು ಮಕ್ಕಳು ಮೇಲಿಂದ ಮೇಲೆ ಮನೆಗೆ ಬಂದು, ತೊಂದರೆ ನೀಡುತ್ತಿದ್ದರು.

ಏಪ್ರಿಲ್ 2023 ರಲ್ಲಿ 3ನೇ ಆರೋಪಿ ದೂರುದಾರರ ಮೇಲೆ ಹಲ್ಲೆಯನ್ನು ಮಾಡಿ, ದೂರುದಾರರ ಬಲಕೈ ಮುರಿದಿರುತ್ತಾರೆ. ದೂರುದಾರರಿಗೆ ಅವರ ಗಂಡನ ಮನೆಯಲ್ಲಿ ಅಸಾಧ್ಯವಾದ ಕಾರಣ ತನ್ನ ತಂದೆಯ ಮನೆಗೆ ಬಂದಿರುತ್ತಾರೆ. 1ನೇ ಆರೋಪಿ ರಾಜಕೀಯವಾಗಿ ಪ್ರಬಲವಿದ್ದ ಕಾರಣ ಅವರ ವಿರುದ್ಧ ಅವರು ವಾಸವಿರುವ ಅಸ್ಸಾಂನಲ್ಲಿ ಪಿರ್ಯಾದುದಾರರಿಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಆಗಿರುವುದಿಲ್ಲ.

3. ದೂರುದಾರರು  ಹತ್ತು ವರ್ಷಗಳ ಕಾಲ ದುಡಿದಿರುವ ಎಲ್ಲಾ ದುಡಿವೆಯ ಹಣವನ್ನು ಆರೋಪಿಗಳು ತೆಗೆದುಕೊಂಡಿರುತ್ತಾರೆ. ಅದಲ್ಲದೆ ದೂರುದಾರರ ವಿದ್ಯಾಭ್ಯಾಸದ ದಾಖಲಾತಿಗಳನ್ನು ಆರೋಪಿಗಳು ತಮ್ಮ ವಶದಲ್ಲೆ ಇಟ್ಟುಕೊಂಡಿರುತ್ತಾರೆ. ಅದಲ್ಲದೆ 205 ಗ್ರಾಂ ಚಿನ್ನ ಸಹ ಆರೋಪಿಗಳು ದೂರುದಾರರಿಗೆ ಕೊಡದೇ, ಅವರ ಹತ್ತಿರ ಇಟ್ಟುಕೊಂಡಿರುತ್ತಾರೆ. ದೂರುದಾರರು ಇಲ್ಲಿ ಬಂದ ನಂತರ ಆರೋಪಿತರ ವಿರುದ್ಧ ಸಿಡಿಪಿಓ, ಪೊನ್ನಂಪೇಟೆ, ಮಹಿಳಾ ಪೊಲೀಸ್ ಠಾಣೆ, ಮಡಿಕೇರಿ ಹಾಗೂ ಪೊಲೀಸ್ ವರಿಷ್ಟಾಧಿಕಾರಿ, ಮಡಿಕೇರಿ ರವರಿಗೆ ದೂರನ್ನು ನೀಡಿರುತ್ತಾರೆ. ಅದಲ್ಲದೆ ದೂರುದಾರರು ಠಾಣಾಧಿಕಾರಿ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯವರಿಗೆ ದೂರನ್ನು ನೀಡಿರುತ್ತಾರೆ.

ಪ್ರಮಾಣೀಕೃತ ಹೇಳಿಕೆ ಮುಕ್ತಾಯ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-

(ಪ್ರದೀಪ ಪೋತದಾರ)
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.